ಸರ್ಕಾರದ ವಿರೋಧವಿದೆ. ಈಗಾಗಲೇ ಸಾಕಷ್ಟು ಪ್ರದೇಶವನ್ನು ಹುಲಿ ಸಂರಕ್ಷಣೆಗೆ ಮೀಸಲಿಟ್ಟಿರುವುದರಿಂದ ಹೊಸದಾಗಿ ವಿಸ್ತರಣೆ ಮಾಡುವುದು ಬೇಡವೆಂದು ಅನುಮೋದನೆ ಮಾಡಲಾಗಿದೆ. ಈ ಮಾಹಿತಿಗಳನ್ನು ಒಂದು ಸರ್ಕಾರಿ ಆದೇಶ ಮಾಡಿ, ಕೇಂದ್ರ ಸರ್ಕಾರಕ್ಕೆ ತಿರಸ್ಕೃತ ಪ್ರಸ್ತಾವನೆಯನ್ನು ಕಳುಹಿಸಿ ಇದಕ್ಕೆ ಒಪ್ಪುವುದಿಲ್ಲವೆಂದು ಸ್ಪಷ್ಟವಾಗಿ ಕೇಂದ್ರ ಸರ್ಕಾರಕ್ಕೆ ತಿಳಿಸುತ್ತೇವೆ.

5) ವಿಷಯ : ಶಿಕ್ಕಲಿಗಾರ್ ಸಮಾಜದವರ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆ.

ಶ್ರೀ ಶ್ರೀಕಾಂತ್ ಕುಲಕರ್ಣಿ (ಜಮಖಂಡಿ) : – ಸಾಮಾಜಿಕವಾಗಿ ಅತ್ಯಂತ ಹಿಂದುಳಿದವರು, ತುಳಿತಕ್ಕೆ ಒಳಗಾದ ಶೋಷಿತ ಪೀಡಿತರಾದಂತಹ 'ಶಿಕ್ಕಲಿಗಾರ್' ಎನ್ನುವ ಒಂದು ಸಮಾಜ ಈ ರಾಜ್ಯದಲ್ಲಿ ಅಲ್ಲಲ್ಲಿ ವಿಸ್ತೃತವಾಗಿ ಹಮ್ಮಿಕೊಂಡಿದೆ. ನನ್ನ ಕ್ಷೇತ್ರವಾದ ಜಮಖಂಡಿಯಲ್ಲಿ ಹಾಗೂ ಅಲ್ಲಿನ ಕೆಲವೊಂದು ಗ್ರಾಮಾಂತರ ಭಾಗಗಳಲ್ಲಿ, ಸ್ವಾತಂತ್ರ್ಯ ದೊರಕಿ 64 ವರ್ಷಗಳಾದರೂ, ಸರ್ಕಾರದ ಯಾವುದೇ ಸವಲತ್ತುಗಳು ಅವರಿಗೆ ಸಿಕ್ಕಿರುವುದಿಲ್ಲ. ಈ ವರ್ಗದ ವ್ಯವಸ್ಥೆಯನ್ನು ಗುರುತಿಸಿರುವುದಿಲ್ಲ ಮತ್ತು ಅವರನ್ನು ಪ್ರವರ್ಗ–1 ರಲ್ಲಿ ಸೇರಿಸಿರುವುದರಿಂದ ಸರ್ಕಾರದ ಯಾವುದೇ ಸೌಲಭ್ಯ ದೊರಕಿರುವುದಿಲ್ಲ. ಆದುದರಿಂದ ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಹಂಚಿಹೋದಂತಹ ಈ ವರ್ಗಕ್ಕೆ ಯಾವುದೇ ಶಿಕ್ಷಣ, ಉದ್ಯೋಗ, ಯಾವುದೇ ಸೌಲಭ್ಯವಿಲ್ಲದ ಈ ವರ್ಗವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವ್ಯವಸ್ಥೆಯಾಗಬೇಕು. ಈ ಹಿನ್ನಲೆಯಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಗಮನಕ್ಕೆ ವಿಷಯವನ್ನು ತಂದು, ತಕ್ಷಣವೇ ಅಗತ್ಯ ಕ್ರಮವನ್ನು ಕೈಗೊಂಡು ಅವರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ನ್ಯಾಯವನ್ನು ದೊರಕಿಸಿಕೊಡಬೇಕೆಂದು ಈ ಶೂನ್ಯವೇಳೆಯ ಮೂಲಕ ಪ್ರಸ್ತಾಪಿಸುತ್ತೇನೆ.

ಶ್ರೀ ಸಿದ್ದು ಸವದಿ (ಮುಖ್ಯ ಸಚೇತಕರು) : – ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಮಾನ್ಯ ಸದಸ್ಯರಾದ ಶ್ರೀ ಶ್ರೀಕಾಂತ್ ಕುಲಕರ್ಣಿಯವರು ಪ್ರಸ್ತಾಪ ಮಾಡಿರುವ ವಿಷಯ ಅತ್ಯಂತ ಕ್ಲಿಷ್ಟ ಪರಿಸ್ಥಿತಿಯಲ್ಲಿ ಈ ಶಿಕ್ಕಲಿಗಾರ್ ಸಮಾಜ ಜೀವನ ಸಾಗಿಸುತ್ತಿದೆ. ಅವರ ಕಾಯಕವೇ ಭಿಕ್ಷೆ ಬೇಡುವುದು. ತಾವು ನಂಬುವುದಿಲ್ಲ. ಅದರು ತಿಂಗಳಿಗೊಮ್ಮೆ ತಿಂಗಳಿಗೊಮ್ಮೆ ಅವರು ಸ್ನಾನ ಮಾಡುತ್ತಾರೆ. ಆ ರೀತಿಯ ಸಮಾಜವೂ ರಾಜ್ಯದಲ್ಲಿದೆ ಎನ್ನುವಂಥದ್ದನ್ನು ತಾವು ತಿಳಿದುಕೊಳ್ಳಬೇಕು. ಅದನ್ನು ಈಗಾಗಲೇ ನಾನು ಪ್ರಸ್ತಾಪ ಮಾಡಿದ್ದೇವೆ. ದಯಮಾಡಿ ರಾಜ್ಯ ಸರ್ಕಾರ ಮನಸ್ಸು ಮಾಡಿ. ಅವರನ್ನು ಕೇಂದ್ರ ಸರ್ಕಾರಕ್ಕೆ

ST ಯೊಳಗೆ ಸೇರ್ಪಡೆ ಮಾಡುವುದಕ್ಕೆ proposal ಕಳುಹಿಸಬೇಕೆಂದು ವಿನಂತಿಯನ್ನು ನಾನು ಮಾಡುತ್ತೇನೆ.

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದಿಖಾನೆ ಸಚಿವರು) : – ಸನ್ಮಾನ್ಯ ಅಧ್ಯಕ್ಷರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಜಾತಿಗಳನ್ನು ಸೇರ್ಪಡೆ ಮಾಡುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ. ಕೇಂದ್ರ ಸರ್ಕಾರಕ್ಕೆ ಮಾತ್ರ ಅಧಿಕಾರವಿದೆ. ನಮ್ಮ ಮಾನ್ಯ ಶ್ರೀಕಾಂತ್ ಸುಬ್ರಾವ್ ಕುಲಕರ್ಣಿಯವರು ಹಾಗೂ ಮಾನ್ಯ ಸಿದ್ದು ಸವದಿಯವರು ಹೇಳಿದ ವಿಚಾರವನ್ನು ನಾನು ಗಮನಿಸಿದ್ದೇವೆ. ಆದರೆ ರಾಜ್ಯದ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸಂಬಂಧಿಸಿದಂತೆ ಒಂದು ಗಾಬರಿ ವಿಚಾರವೆಂದರೆ, ಸ್ವಾತಂತ್ರ್ಯ ಪೂರ್ವದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಕೇವಲ ಏಳು ಜಾತಿಗಳು ಮಾತ್ರ ಸೇರ್ಪಡೆಯಾಗಿತ್ತು. ತದನಂತರ, ರಾಜಕಾರಣದ ಒತ್ತಡಗಳಿಂದ ಇವತ್ತು 100+50=151 ಜಾತಿ ಸೇರ್ಪಡೆಯಾಗಿದೆ. ಅಸ್ಪೃಶ್ಯರು ಮಾತ್ರ ಪರಿಶಿಷ್ಟ ಜಾತಿಯಲ್ಲಿ ಇರಬೇಕೆನ್ನುವುದು ಈ ರಾಜ್ಯದ ಜನತೆ ಅಪೇಕ್ಷೆಯಾಗಿದೆ. ಆ ಒಂದು ವಿಚಾರದಲ್ಲಿ ರಾಜ್ಯದಲ್ಲಿ ಸಾಕಷ್ಟು ಚರ್ಚೆ ಆಗಬೇಕಾಗಿದೆ ಹಾಗೂ ರಾಷ್ಟ್ರದಲ್ಲಿ ಚರ್ಚೆ ಆಗಬೇಕಾಗಿದೆ. ಆದರೂ ಸಹ ಅವರ ಕೋರಿಕೆಯಂತೆ ಈ ಒಂದು ಸಮುದಾಯವನ್ನು ಪರಿಶಿಷ್ಟ ವರ್ಗಕ್ಕೆ economical survey report ಸೇರಿಸಲು ಅನ್ನು ತರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವಂಥ ಕೆಲಸವನ್ನು ನಾನು ಮಾಡುತ್ತೇನೆ.

6. ವಿಷಯ : ಉಪಹಾರ ಹೋಟೆಲ್‌ಗಳನ್ನು ರಾತ್ರಿ ವೇಳೆಯಲ್ಲಿ ತೆರೆಯುವ ಕುರಿತು.

ಶ್ರೀ ಆರ್. ರೋಷನ್ ಬೇಗ್ : – ಮಾನ್ಯ ಸಭಾಧ್ಯಕ್ಷರೆ, ರಾಜಧಾನಿ ಬೆಂಗಳೂರಿನಲ್ಲಿ ಬೇಕಾದಷ್ಟು ತಮಗೆ ಗೊತ್ತಿರುವ ಹಾಗೆ ಫೈಸ್ಟಾರ್ ಹೋಟೆಲ್‌ಗಳಿವೆ. ಬೆಂಗಳುರು ನಗರದಲ್ಲಿ Windsor Manner Hotel ಆಗಲಿ, ITC Garden Hotel ಆಗಲಿ ನೂರಾರು Five Star, 4 Star Hotel ಗಳಿವೆ, ರಾತ್ರಿ 12–00 ಗಂಟೆ, 2–00 ಗಂಟೆ, 3–00 ಗಂಟೆ, ರಾತ್ರಿಯಲ್ಲಿ ಊಟ ತಿಂಡಿ, ತಿನ್ನಬೇಕಾದರೆ, ನಗರದ ಈ ಹೋಟೆಲ್‌ಗಳಿಗೆ ಹೋದರೆ ಆರಾಮವಾಗಿ ತಿಂಡಿ ತಿಂದುಕೊಂಡು ಬರಬಹುದು. ಆದರೆ, ಇಂತಹ ಹೋಟೆಲ್‌ಗಳಿಗೆ ಶ್ರೀಮಂತರು ಮಾತ್ರ ಹೋಗಬಹುದಾಗಿದೆ. Middle class ನವರು low middle class ನವರು...